ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸ್ಥಳೀಯ ಸಂಸ್ಥೆ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯಕರ್ನಾಟಕ ದಿನಾಂಕ : DATE : 21/02/2020

# ಮಾಧ್ಯಮಿಕ ಶಿಕ್ಷಣ ಯೋಜನೆ ಹಣ ಸದ್ಬಳಕೆಯಲ್ಲಿ ವಿಫಲ

## ಸ್ಥಳೀಯ ಸಂಸ್ಥೆಗಳ ಸಮಿತಿ ವರದಿ ಉಲ್ಲೇಖ

**ವಿಕ ಸುದ್ದಿಲೋಕ** ಬೆಂಗಳೂರು 21/2/20

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಯೋಜನೆಯಲ್ಲಿ (ಆರ್‌ಎಂಎಸ್‌ಎ) ರಾಜ್ಯಕ್ಕೆ ಬಿಡುಗಡೆಯಾದ ಹಣ ಸದ್ಬಳಕೆಯಲ್ಲಿ ಸರಕಾರ ವಿಫಲವಾಗಿದೆ ಎಂದು ವಿಧಾನ ಮಂಡಲದ ಸ್ಥಳೀಯ ಸಂಸ್ಥೆ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಗುರುವಾರ ವಿಧಾನಸಭೆಯಲ್ಲಿ ಮಂಡಿಸಿದ ಮಧ್ಯಂತರ ವರದಿಯಲ್ಲಿ ಅನುದಾನ ಬಳಕೆಯಲ್ಲಿ ಆದ ಲೋಪದ ಬಗ್ಗೆ ಉಲ್ಲೇಖಿಸಲಾಗಿದ್ದು, ತಪ್ಪಿತಸ್ಥ ಅಧಿಕಾರಿಗಳ ರಕ್ಷಣೆ ಬಗ್ಗೆ ಬೇಸರ ವ್ಯಕ್ತಪಡಿಸಲಾಗಿದೆ. ಶಾಸಕ ಆರಗ ಜ್ಞಾನೇಂದ್ರ ಅಧ್ಯಕ್ಷತೆಯ ಈ ಸಮಿತಿಯಲ್ಲಿ ಸಿ.ಎಸ್.ಪುಟ್ಟರಾಜು, ಹಾಲಪ್ಪ ಹರತಾಳು, ಶಿವನಗೌಡ ನಾಯಕ್, ಸಿದ್ದು ಸವದಿ ಸೇರಿ 19 ಸದಸ್ಯರಿದ್ದಾರೆ.

ಆರ್‌ಎಂಎಸ್‌ಎ ಕಾಮಗಾರಿಗಳಿಗೆ ಏಕರೂಪ ಟೆಂಡರ್ ಕರೆಯದೆ, ಪ್ಯಾಕೇಜುಗಳಾಗಿ ವಿಂಗಡಿಸಿದ್ದೇ ಯೋಜನೆ ವಿಫಲವಾಗುವುದಕ್ಕೆ ಮೂಲ ಕಾರಣ. ಮೂಲ ಟೆಂಡರ್ ಕರಾರಿನಲ್ಲಿ ಎಸ್ಕಲೇಷನ್ ಕಾಸ್ಟ್ (ಏರಿಕೆ ಮೊತ್ತ) ಇಲ್ಲದಿದ್ದರೂ ಅಂದಿನ ಯೋಜನಾ ಅಭಿಯಂತರರು ತಮ್ಮ ಸ್ವ ಹಿತಾಸಕ್ತಿಗಾಗಿ ಇಲಾಖಾ ಮುಖ್ಯಸ್ಥರ ಅನುಮತಿ ಪಡೆಯದೇ ಸೇರ್ಪಡೆ ಮಾಡಿದ್ದಾರೆ. ಎಲ್ಲ ಸಿವಿಲ್ ಕಾಮಗಾರಿಗಳನ್ನು 18 ತಿಂಗಳೊಳಗಾಗಿ ಪೂರ್ಣಗೊಳಿಸಲು ಸಚಿವ ಸಂಪುಟ ಸೂಚಿಸಿದ್ದರೂ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸಿಲ್ಲ ಎಂದು ಸಮಿತಿ ಅಸಮಾಧಾನ ವ್ಯಕ್ತಪಡಿಸಿದೆ.

ಏರಿಕೆ ಮೊತ್ತದ ಬಗ್ಗೆ ಮಹಾಲೆಕ್ಕ ಪರಿಶೋಧಕರು ಆಕ್ಷೇಪ ಸಲ್ಲಿಸಿದಾಗ ಈ ಲೋಪ ಇಲಾಖೆ ಗಮನಕ್ಕೆ ಬಂದಿದೆ. ಆದರೆ, ಇಬ್ಬರು ಅಭಿಯಂತರರ ಮೇಲೆ ಕಾನೂನು ರೀತ್ಯ ಕ್ರಮ ಕೈಗೊಂಡಿಲ್ಲ. ಯೋಜನಾ ಅಭಿಯಂತರಾದ ಟಿ.ಕೃಷ್ಣೇಗೌಡ ಮತ್ತು ವಿಜಯ್ ತಪ್ಪು ಮಾಡಿರುವುದು 2015ರಲ್ಲಿಯೇ ಇಲಾಖೆ ಗಮನಕ್ಕೆ ಬಂದಿದ್ದರೂ ಕಠಿಣ ಕ್ರಮ ಕೈಗೊಳ್ಳುವಲ್ಲಿ ಅಂದಿನ ಯೋಜನಾ ನಿರ್ದೇಶಕರು, ಇಲಾಖೆ ಮುಖ್ಯಸ್ಥರು ವಿಫಲರಾಗಿದ್ದಾರೆ ಸಮಿತಿ ಅಭಿಪ್ರಾಯಪಟ್ಟಿದೆ.

ಈ ಯೋಜನೆ ಪ್ರಾರಂಭಗೊಂಡ ಅವಧಿಯಿಂದ ಇಲ್ಲಿಯವರೆಗೆ ಕರ್ತವ್ಯ ನಿರ್ವಹಿಸಿರುವ ಈಗಿನ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯ ಯೋಜನಾ ನಿರ್ದೇಶಕರು, ಇಬ್ಬರು ಅಭಿಯಂತರರು ಇದಕ್ಕೆ ನೇರ ಹೊಣೆ. ಅವರ ವಿರುದ್ಧ ರಾಜ್ಯ ಸರಕಾರ ಕ್ರಮ ಕೈಗೊಳ್ಳಬೇಕೆಂದು ಸಮಿತಿ ಶಿಫಾರಸು ಮಾಡಿದೆ.

**ಇಲಾಖಾ ಪ್ರಧಾನ ಕಾರ್ಯದರ್ಶಿ, ಯೋಜನಾ ನಿರ್ದೇಶಕರು ಮುತುವರ್ಜಿ**



**ವಹಿಸಿ ಕೆಲಸ ನಿರ್ವಹಿಸದಿರುವುದಕ್ಕೆ ಸಮಿತಿ ಅಸಮಾಧಾನ ವ್ಯಕ್ತಪಡಿಸಿದೆ. ಬಾಕಿ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸಿರುವುದು ಸಮರ್ಪಕವಾಗಿಲ್ಲ ಎಂದು ಗೊತ್ತಾಗಿದೆ. ಹಣ ಬಳಕೆಗೆ ಶಿಕ್ಷಣ ಇಲಾಖೆ ಅಧಿಕಾರಿಗಳು ಆಸಕ್ತಿ ಹಾಗೂ ಇಚ್ಛಾಶಕ್ತಿ ತೋರಿಲ್ಲ.**

**-ಆರಗ ಜ್ಞಾನೇಂದ್ರ**, ಸಮಿತಿ ಅಧ್ಯಕ್ಷ

22